

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಎತ್ತಣಿಂದೆತ್ತ ಸಂಬಂಧವಯ್ಯಾ!.....

ಡಿಸೆಂಬರ್ ತಿಂಗಳು ಬಂತೆಂದರೆ ಶಾಲಾಮಕ್ಕಳಿಗೆ ಖುಷಿಯೋ ಖುಷಿ. ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಕಡ್ಡಾಯವಾಗಿ ಪಾಠ ಕೇಳಿ 'ಬೋರು'ಹೊಡಿಸಿಕೊಳ್ಳುವ ಬದಲು, ನಾಲ್ಕು ದಿನ ಹಾಯಾಗಿ ಶೈಕ್ಷಣಿಕ ಪ್ರವಾಸ ಹೊರಟು ಸ್ನೇಹಿತರೊಂದಿಗೆ ಹರಟೆ ಹೊಡೆಯುತ್ತಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಬರುವ ಸದವಕಾಶ ಎಳೆಯ ಮಕ್ಕಳ ಮನಸ್ಸನ್ನು ಮುದಗೊಳಿಸುತ್ತದೆ. ಒಮ್ಮೆ ರಾಣೇಬೆನ್ನೂರಿನಿಂದ ಶಾಲಾಮಕ್ಕಳು ಚಿತ್ರದುರ್ಗದ ಕೋಟೆಯನ್ನು ನೋಡಿಕೊಂಡು ಏರುಹೊತ್ತಿನಲ್ಲಿ ಮಧ್ಯಾಹ್ನದ ಪ್ರಸಾದಕ್ಕೆಂದು ಸಿರಿಗೆರೆಗೆ ಬಂದಿದ್ದರು. ಆ ದಿನ ನಾವು ಮಠದಲ್ಲಿಯೇ ಇದ್ದುದರಿಂದ ಉದ್ಯಾನವನದ ಲತಾಮಂಟಪದಲ್ಲಿ ನಮ್ಮ ದರ್ಶನ ಪಡೆದರು. ಶಿಸ್ತಿನಿಂದ ಒಬ್ಬೊಬ್ಬರೇ ಸಾಲಾಗಿ ಬಂದು ನಮಸ್ಕರಿಸಿ ಕುಳಿತುಕೊಂಡರು. ಅವರನ್ನು ಕರೆದುಕೊಂಡು ಬಂದಿದ್ದ ಶಿಕ್ಷಕ/ಶಿಕ್ಷಕಿಯರು ತಮ್ಮ ಪರಿಚಯವನ್ನು ಮಾಡಿಕೊಂಡು ಶಾಲಾಪ್ರವಾಸದ ವಿಚಾರ ತಿಳಿಸಿದರು. ಬಿಸಿಲಿನಲ್ಲಿ ಬೆಟ್ಟವನ್ನು ಹತ್ತಿ ಏಳು ಸುತ್ತಿನ ಕೋಟೆಯೊಳಗೆ ಸುತ್ತಾಡಿ ಬಂದಿದ್ದ ಮಕ್ಕಳ ಮುಖ ಸಹಜವಾಗಿ ಬಾಡಿತ್ತು. ಆದರೂ ಅವರ ಉತ್ಸಾಹ ಕುಂದಿರಲಿಲ್ಲ. ಥಳ ಥಳ ಹೊಳೆಯುವ ತಮ್ಮ ಅರಳು ಕಂಗಳಿಂದ ನಮ್ಮನ್ನು ನೋಡುತ್ತಾ ಪ್ರಾಂಜಲ ಮನಸ್ಸಿನಿಂದ ಏನನ್ನೋ ಬೇಡಿಕೊಳ್ಳುತ್ತಿರುವಂತೆ ಕೈಮುಗಿದು ಕುಳಿತುಕೊಂಡಿದ್ದರು. 10 ರಿಂದ 12 ವರ್ಷದ ವಯೋಮಾನದ ಮಕ್ಕಳಿರಬಹುದು. ಅವರೊಂದಿಗೆ ಮಾತನಾಡಬೇಕೆನಿಸಿತು.

**'ಪ್ರಸಾದ ಆಯ್ತಾ?'**
**'ಹ್ಞೂಂ, ಆಯ್ತು'. ಮಕ್ಕಳು ತಲೆ ಅಲ್ಲಾಡಿಸಿದವು.**
**ಚಿತ್ರದುರ್ಗದ ಕೋಟೆಯನ್ನು ನೋಡಿಕೊಂಡು ಬಂದಿರಾ?'**
**'ಹೌದು'. ಎಲ್ಲ ಮಕ್ಕಳೂ ಒಟ್ಟಾಗಿ ಏರಿದ ದನಿಯಲ್ಲಿ ಉತ್ತರಿಸಿದವು.**
**'ಹೇಗಿತ್ತು ಕೋಟೆ?'**
**'ಚೆನ್ನಾಗಿತ್ತು ಸಾರ್'. ಮತ್ತೆ ಅದೇ ಕೋರಸ್ (choras).**
**'ಸಾರ್ ಅನ್ನೋಕೆ ನಾವೇನು ಮೇಷ್ಟ್ರಾ?' ('ಸಾರ್' ಅನ್ನಬಾರದು, 'ಬುದ್ದಿ' ಅನ್ನಬೇಕು ಎಂದು ಮೆಲುದನಿಯಲ್ಲಿ ಮಕ್ಕಳಿಗೆ ತಿಳಿಹೇಳಲು ಶಿಕ್ಷಕಿಯೊಬ್ಬಳು ವಿಫಲ ಪ್ರಯತ್ನ ನಡೆಸಿದಳು.)**
**'ಅಲ್ಲ, ಗುರುಗಳು'**
**'ಭೇಷ್! ಒನಕೆ ಓಬವ್ವನ ಕಿಂಡಿ ನೋಡಿದಿರಾ?'**
**'ಹೌದು ಸಾರ್...' ಎನ್ನುತ್ತಿದ್ದಂತೆಯೇ ಕೆಲವರು ತಲೆ ಕೊಡವಿ ತಡವರಿಸುತ್ತಾ 'ಹೌದು ಬುದ್ದಿ' ಎಂದರು.**
**'ಕೋಟೆ ಕಟ್ಟಿಸಿದವರು ಯಾರು?'**
**'ಮದಕರಿನಾಯಕ!'**
**'ಒನಕೆ ಓಬವ್ವ ಮದಕರಿನಾಯಕನಿಗೆ ಏನಾಗಬೇಕು?' ನಿರುತ್ತರ, ಚಡಪಡಿಕೆ, ಮೌನ.**
**'ಏನಮ್ಮಾ ಏನಾಗಬೇಕು?' ಒಬ್ಬ ಬಾಲಕಿಯನ್ನು ದಿಟ್ಟಿಸುತ್ತಾ ನಮ್ಮ ಮರುಪ್ರಶ್ನೆ.**
**'ಹೆಂಡತಿಯಾಗಬೇಕು!' ಎಂದಳು ಆ ಹುಡುಗಿ. ಶಿಕ್ಷಕರು ಸುಸ್ತು!**

(ದೃಶ್ಯ 2)

ಎಂದಿನಂತೆ ಪ್ರಾತಃಕಾಲ ವಾಕಿಂಗ್ ಹೋಗಿ ಮಠಕ್ಕೆ ವಾಪಾಸ್ ಬರುವಾಗ ದಾರಿಯಲ್ಲಿ ಸಮವಸ್ತ್ರ ಧರಿಸಿದ ಶಾಲೆಯ ಹತ್ತಾರು ಬಾಲಕಿಯರು ಎದುರಾದರು. ಅವರ ಮುಖದಲ್ಲಿ ಅರುಣೋದಯದ ಕಳೆ ಇತ್ತು. ಹಣೆಯ ಮೇಲೆ ವಿಭೂತಿ ರಾರಾಜಿಸುತ್ತಿತ್ತು. ಹತ್ತಿರ ಬಂದೊಡನೆಯೇ ತಲೆಬಾಗಿ ನಮಸ್ಕರಿಸಿದರು.

**'ಏನ್ ಮಕ್ಕಳು ಇಷ್ಟು ಹೊತ್ತಿಗೇ ಶಾಲೆಗೆ ಹೊರಟಿದ್ದೀರಿ? ಮಾರ್ನಿಂಗ್ ಕ್ಲಾಸು ಇದೆಯಾ?'**
**'ಇಲ್ಲ ಬುದ್ದಿ. ಈ ದಿನ ಶಾಲೆಗೆ ರಜಾ.'**
**'ಏಕೆ?'**
**'ಇವತ್ತು ಗಾಂಧೀಜಯಂತಿ.'**
**'ಸೋನಿಯಾ ಗಾಂಧೀ ಗೊತ್ತಾ ನಿಮಗೆ?'**
**'ಹ್ಞೂಂ, ಗೊತ್ತು.'**
**'ಗಾಂಧೀಜಿಗೆ ಏನಾಗ್‌ಬೇಕು?'**
**'ಮಗಳಾಗಬೇಕು!' ತಟ್ಟನೆ ಒಬ್ಬ ಬಾಲಕಿ ಉತ್ತರಿಸಿದಳು.**
**'ಏನು? ಏನಂದೆ?' ಹುಬ್ಬುಗಂಟಿಕ್ಕಿ ನೋಡಿದೆವು. ಅವಳ ಉತ್ತರ ತಪ್ಪೆಂದು ತಿಳಿದು ಮತ್ತೊಬ್ಬ ಬಾಲಕಿ 'ಸರಿಪಡಿಸಿ' ಉತ್ತರಿಸಿದಳು:**
**'ಸೊಸೆಯಾಗಬೇಕು!' ಗಾಂಧೀಜಿಗೆ ಗೋಡ್ಸೆ ಎರಡನೆಯ ಬಾರಿ ಗುಂಡು ಹೊಡೆದಂತಾಯಿತು! 'ಹೇ ರಾಮ್! ಹೇ ರಾಮ್!' ಮಾರ್ದನಿಗೊಂಡಿತು!**

(ದೃಶ್ಯ 3)

ನಮ್ಮ ಮಠದಲ್ಲಿ ವರ್ಷದಲ್ಲಿ ಎರಡು ಬಾರಿ 'ಶಿವಧ್ವಜಾರೋಣ' ಮಾಡಿದರೆ ಇನ್ನೆರಡುಬಾರಿ 'ರಾಷ್ಟ್ರಧ್ವಜಾರೋಹಣ' ಮಾಡುತ್ತೇವೆ. ನಮ್ಮ ನಮ್ಮ ನಂಬುಗೆಯ ಧರ್ಮ ಮತ್ತು ರಾಷ್ಟ್ರಧರ್ಮ ಎರಡೂ ಕೈಜೋಡಿಸಿದರೆ ಮಾತ್ರ ವ್ಯಕ್ತಿಯ ಅಂತರಂಗ ಮತ್ತು ಬಹಿರಂಗದ ಬದುಕು ಪರಸ್ಪರ ಪೂರಕವಾಗಿ ವಿಕಾಸಗೊಳ್ಳುತ್ತದೆ ಎಂಬುದು ನಮ್ಮ ಅಭಿಮತ. ವ್ಯಕ್ತಿಯ ಪರಿಶುದ್ಧಿಯೇ ಸಮಷ್ಟಿಯ ಸುಧಾರಣೆ. ಅಂದು ಸ್ವಾತಂತ್ರ್ಯೋತ್ಸವ

ದಿನಾಚರಣೆ. ಆ ದಿನ ಸಿರಿಗೆರೆಯಲ್ಲಿ ನಮ್ಮ ವಿದ್ಯಾಸಂಸ್ಥೆಯಲ್ಲಿ ಓದುವ ಸಾವಿರಾರು ಮಕ್ಕಳಿಂದ ಬೆಳಗಿನ ಹೊತ್ತು ಸಾಲುಸಾಲಾಗಿ ಗ್ರಾಮದ ಬೀದಿಗಳಲ್ಲಿ ಪ್ರಭಾತ್‌ಫೇರಿ. ಮುಂದೆ ಮಠದ ಪಟ್ಟದಾನೆ 'ಗೌರಿ'. ಅದರ ಹಿಂದೆ ಮಕ್ಕಳು, ಶಿಕ್ಷಕರು, ನಾವು ಮತ್ತು ಗ್ರಾಮಸ್ಥರು. ಕೈಯಲ್ಲಿ ಪುಟ್ಟ ರಾಷ್ಟ್ರಧ್ವಜಗಳನ್ನು ಹಿಡಿದು ಚಾಮರದಂತೆ ಬೀಸುತ್ತಾ ಶಾಲಾ ಬ್ಯಾಂಡ್‌ಸೆಟ್ಟಿನ ಧ್ವನಿಗೆ ಲಯಬದ್ಧವಾದ ಹೆಜ್ಜೆಗಳನ್ನು ಹಾಕುತ್ತಾ ಮಕ್ಕಳಿಂದ ಜಯಘೋಷ: 'ಭಾರತ್ ಮಾತಾ ಕೀ ಜೈ', 'ವಂದೇ ಮಾತರಂ', 'ಶಾಂತಿ ಶಿಸ್ತು', 'ಏನೇ ಬರಲಿ ಒಗ್ಗಟ್ಟಿರಲಿ' ಇತ್ಯಾದಿ. ಬಂಧನದ ಕಹಿ ಅನುಭವವೇ ಇಲ್ಲದ ಗಿಳಿವಿಂಡುಗಳ ಉಲಿವು! ಇದಾವುದರ ಪರಿವೆಯೇ ಇಲ್ಲದೆ ಎಂದಿನಂತೆ ಬೆಳಗಿನ ಹೊತ್ತು ತಿಪ್ಪೆಗುಂಡಿಗೆ ಹಾಕಲು ತಲೆಯ ಮೇಲೆ ಸಗಣಿಪುಟ್ಟಿಯನ್ನು ಹೊತ್ತುಕೊಂಡು ಬರುತ್ತಿದ್ದ ಹಳ್ಳಿಯ ಶ್ರಮಜೀವಿಗಳು! ಮನೆಯಿಂದ ಹೊರಗೆ ಕಾಲಿಡುತ್ತಲೇ ಅಭ್ಯಾಸಬಲದಿಂದ ಕಡ್ಡಿಗೀರಿ ಬೀಡಿಹಚ್ಚಿ ಒಂದು 'ದಂ' ಎಳೆದು ಮೈ ಬೆಚ್ಚಗೆ ಮಾಡಿಕೊಳ್ಳುತ್ತಿದ್ದ ಮುಂಜಾನೆಯ ಮುದಿವಯಸ್ಸಿನ 'ಕೊಳ್ಳಿದೆವ್ವಗಳು'! ನಮ್ಮನ್ನು ನೋಡುತ್ತಲೇ ಹೌಹಾರಿ ಕೈಯಲ್ಲಿದ್ದ ಬೀಡಿಯನ್ನು ಕಾಣದಂತೆ ಬೀದಿಗೆ ಬಿಸಾಡಿ ಏನೂ ತಪ್ಪುಮಾಡದವರಂತೆ ನಟಿಸಲು ಯತ್ನಿಸುತ್ತಿದ್ದರು! ಇನ್ನೊಂದೆಡೆ ಮಕ್ಕಳ ಮಧ್ಯೆ 'ಡುರ್, ಡುರ್' ಎಂದು ಅಡ್ಡಾದಿಡ್ಡಿ ಮೋಟಾರು ಸೈಕಲ್ ಓಡಿಸುತ್ತಾ ಮುಂದೆ ಹೋಗಲು ಯತ್ನಿಸುತ್ತಿದ್ದ ಹಳ್ಳಿಯ ಪಡ್ಡೆ ಹುಡುಗರು! ಅವರನ್ನು ನೋಡಿ ಮುಖದ ಮೇಲೆ ಬಾಸುಂಡೆ ಮೂಡುವಂತೆ 'ಕಪಾಳ ಮೋಕ್ಷ' ಮಾಡುವ ಸಿಟ್ಟು ನಮಗೆ. ಯಾರಿಗೂ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ, ಆತ್ಮಾರ್ಪಣೆ ಮಾಡಿದ ಆ ಪುಣ್ಯಜೀವಿಗಳ ಸ್ಮರಣೆಯೇ ಇಲ್ಲ. ಎಲ್ಲರೂ ಅವರವರ 'ದಂಧೆ'ಯಲ್ಲಿ ತೊಡಗಿದ್ದಾರೆ. ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಆ ಹುತಾತ್ಮರನ್ನು ನೆನೆಸಲು ಯಾರಿಗೂ ಪುರುಸೊತ್ತಿಲ್ಲ!

ಧ್ವಜಾರೋಹಣ ನಡೆಯುವ ವಿದ್ಯಾರ್ಥಿನಿಲಯ ತಲುಪುತ್ತಲೇ ಪ್ರವೇಶದ್ವಾರದ ಮೊಗಸಾಲೆಯಲ್ಲಿ ಕುಳಿತೆವು. ಸಮವಸ್ತ್ರ ಧರಿಸಿ ಶಿಸ್ತಿನಿಂದ ದಾಪುಗಾಲಿಟ್ಟು ಬರುತ್ತಿದ್ದ ಮಕ್ಕಳನ್ನು ನೋಡುವುದೇ ಒಂದು ಆಹ್ಲಾದಕರ ಅನುಭವ. ಸಾಲಿನಲ್ಲಿ ಮುಂದೆ ಸಾಗಿದ್ದ ಒಬ್ಬ ಬಾಲಕನನ್ನು ಹತ್ತಿರ ಕರೆದೆವು. 8-10 ವರ್ಷದ ವಯಸ್ಸಿನವನಿರಬೇಕು. 'ಈ ದಿನ ಏನಿದೆ?' ಎಂದು ಕೇಳಿದೆವು. ಅವನು ಕೊಟ್ಟ ಉತ್ತರ ನಮ್ಮನ್ನು ತಬ್ಬಿಬ್ಬಾಗಿಸಿತು. ಹೋಟೆಲ್ ಮಾಣಿ ಹೇಳುವಂತೆ ಆ ಪೋರ 'ಉಪ್ಪಿಟ್ಟು-ಕೇಸರೀಬಾತ್ ಇದೆ' ಎಂದು ಹೇಳುವುದೇ! ಏಕೆ ಆ ಹುಡುಗ ಹಾಗೆ ಹೇಳುತ್ತಿದ್ದಾನೆಂದು ನಮಗೆ ತಕ್ಷಣ ಅರ್ಥವಾಗಲಿಲ್ಲ. ಹತ್ತಿರದಲ್ಲಿಯೇ ಇದ್ದ ನಿಲಯಪಾಲಕರಿಂದ ನಿಜಸಂಗತಿ ಏನೆಂಬುದು ತಿಳಿಯಿತು. ಕಳೆದ ಜನವರಿಯಲ್ಲಿ ನಡೆದ ಗಣರಾಜ್ಯೋತ್ಸವದ ದಿನದಂದು ಧ್ವಜಾರೋಹಣ ಮುಗಿದ ಮೇಲೆ ಮಕ್ಕಳಿಗೆ ಚಾಕಲೇಟ್ ವಿತರಣೆ ಮಾಡಿದ್ದರು. ಪಾಪ! ನಸುಕಿನಲ್ಲಿಯೇ ಎದ್ದು ದೂರದ ಹಳ್ಳಿಗಳಿಂದ ನಡೆದು ಬಂದ ಮಕ್ಕಳಿಗೆ ಬರೀ ಒಂದೆರಡು ಚಾಕಲೇಟ್ ಕೊಟ್ಟರೆ ಹೊಟ್ಟೆ ತುಂಬುವುದೇ? ನಮಗೆ ಆ ಮಕ್ಕಳನ್ನು ನೋಡಿ 'ಅಯ್ಯೋ' ಎನಿಸಿತ್ತು. ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಬಂದ ಎಷ್ಟೋ ಬಡ ಮಕ್ಕಳು ಧ್ವಜಾರೋಹಣದ ಸಂದರ್ಭದಲ್ಲಿ ಎಳೆ ಬಿಸಿಲಿಗೆ ತಲೆಸುತ್ತು ಬಂದು ಬೀಳುತ್ತವೆ. ಆದ್ದರಿಂದ ಧ್ವಜಾರೋಹಣ ಮುಗಿದ ತಕ್ಷಣವೇ ಎಲ್ಲ ಮಕ್ಕಳಿಗೂ ಹೊಟ್ಟೆ ತುಂಬಾ ತಿನ್ನಲು ಏನಾದರೂ ತಿಂಡಿತಿನಸು ಕೊಡಬೇಕೆಂದು ಹಿಂದಿನ ಸಾರಿ ಆದೇಶಿಸಿದ್ದೆವು. ಅದರಂತೆ ಎಲ್ಲ ಮಕ್ಕಳಿಗೂ ನಿಲಯಪಾಲಕರು 'ಉಪ್ಪಿಟ್ಟು-ಕೇಸರಿಬಾತ್' ಮಾಡಿಸಿದ್ದರು. ವಿದ್ಯಾರ್ಥಿನಿಲಯದಲ್ಲಿಯೇ ವಾಸವಾಗಿದ್ದ ಆ ಹುಡುಗನ ಮೂಗಿಗೆ ಅದು ಹೇಗೋ ಅಡುಗೆಮನೆಯ ಗಾಳಿ ಬೀಸಿತ್ತು! ಅವನ ಗಮನ ಇದ್ದದ್ದು ತ್ರಿವರ್ಣ ಧ್ವಜದ ಮೇಲಲ್ಲ; ಘಮಘಮಿಸುವ 'ಉಪ್ಪಿಟ್ಟು-ಕೇಸರಿಬಾತ್' ಮೇಲೆ! ಕೇಸರಿಬಾತ್ ಜಿಂದಾಬಾದ್! ಚಾಕಲೇಟ್ ಮುರ್ದಾಬಾದ್!

(ದೃಶ್ಯ 4)

ಮೇಲಿನ ಮೂರು ದೃಶ್ಯಗಳನ್ನು ಅವಲೋಕಿಸಿದಾಗ ಕಾಣಬರುವುದು: ಪ್ರಶ್ನೆಯನ್ನು ಮಕ್ಕಳು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದು ಅಥವಾ ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಗೊತ್ತಿಲ್ಲದಿದ್ದರೂ ಊಹಿಸಿ ಏನನ್ನೋ ವಟಗುಟ್ಟುವುದು. ಇದು ಸಣ್ಣವರಿಂದ ಹಿಡಿದು ದೊಡ್ಡವರವರೆಗೆ ನಮ್ಮ ದೇಶದವರಲ್ಲಿ ಕಾಣಬರುವ ಮನೋದೌರ್ಬಲ್ಯ. ಚಿಕ್ಕ ವಯಸ್ಸಿನಿಂದ ಯಾವ ಅಡೆತಡೆಯೂ ಇಲ್ಲದೆ ರೂಢಿಗತವಾಗಿ ಬೆಳೆದುಬಂದಿರುವ ಕೆಟ್ಟ ಪರಿಪಾಠ. ಇದು ಮಕ್ಕಳ ತಪ್ಪೋ, ಶಿಕ್ಷಕರ ತಪ್ಪೋ, ಹಿರಿಯರ ತಪ್ಪೋ? ನಮ್ಮ ದೇಶದಲ್ಲಿ 'ಗಾಳಿಸುದ್ದಿ'ಗಳು (gossips) ಬೇಗನೆ ಹರಡುವುದು ಈ ಕೆಟ್ಟಸ್ವಭಾವದಿಂದ. ಇವು ಬಾಯಿಂದ ಬಾಯಿಗೆ ಅಣುಬಾಂಬಿನಂತೆ ಆಸ್ಫೋಟಗೊಂಡು ಕ್ಷಣಾರ್ಧದಲ್ಲಿ ದಶದಿಕ್ಕುಗಳಿಗೆ ಹರಡುತ್ತವೆ. ಜನರು ತಮಗೆ ಗೊತ್ತಿಲ್ಲದ ವಿಷಯಗಳಿಗೆ ಉಪ್ಪುಖಾರ ಹಚ್ಚಿ ಪಿಸುಗುಟ್ಟಿ ಸಮಾಜದಲ್ಲಿ ವ್ಯಕ್ತಿ ಕೊರಗಿ ಸಾಯುವಂತೆ ಮಾಡುತ್ತಾರೆ. ಇದೇ ರೀತಿಯ ಪ್ರಶ್ನೆಗಳನ್ನು ಇಂಗ್ಲೆಂಡ್-ಅಮೇರಿಕಾದ ಮಕ್ಕಳಿಗೆ ಕೇಳಿದರೆ ನಿಮಗೆ ಬರುವ ಉತ್ತರ: "I don't know". ಭುಜ ಕುಣಿಸುತ್ತಾ ತುಟಿ ಕಚ್ಚಿ, ಕೈಚೆಲ್ಲಿ 'ನನಗೆ ಗೊತ್ತಿಲ್ಲ' ಎಂದು ಸ್ಪಷ್ಟವಾಗಿ ಹೇಳುತ್ತಾರೆ. ತಮಗೆ ಗೊತ್ತಿಲ್ಲದ ವಿಚಾರಗಳನ್ನು ಗೊತ್ತಿಲ್ಲವೆಂದು ಒಪ್ಪಿಕೊಳ್ಳಲು ಅವರು ನಮ್ಮವರಂತೆ ಮುಜುಗರಪಟ್ಟುಕೊಳ್ಳುವುದಿಲ್ಲ. ಯಾವುದೇ ಪ್ರಶ್ನೆಗೆ ಉತ್ತರ ಹೇಗೆ ಎಲ್ಲಿ ಸಿಕ್ಕುತ್ತದೆ ಎಂಬುದನ್ನು ಮಕ್ಕಳಿಗೆ ಚಿಕ್ಕಂದಿನಿಂದ ಕಲಿಸಿಕೊಡುತ್ತಾರೆ.

ನಾವು ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗ ಒಂದು ದಿನ ಅಲ್ಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯವನ್ನು ನೋಡಲು ಸ್ನೇಹಿತರೊಂದಿಗೆ ಹೋಗಿದ್ದೆವು. ಅದು ಅಲ್ಲಿನ ಪಾರ್ಲಿಮೆಂಟ್‌ಗೆ ಹೋಗುವ ರಿಂಗ್‌ರೋಡ್‌ನಲ್ಲಿದೆ. ಮ್ಯೂಸಿಯಂ ಒಳಗೆ ಹೋದಾಗ ಅನೇಕ ಶಾಲಾ ಮಕ್ಕಳು ಪ್ರವಾಸ ಬಂದಿದ್ದು ಕೈಯಲ್ಲಿ ಬಣ್ಣದ ಕಾಗದ ಮತ್ತು ಪೆನ್ಸಿಲ್ ಹಿಡಿದು ಅತ್ತಿಂದಿತ್ತ ಜಿಂಕೆಮರಿಗಳಂತೆ ಓಡಾಡುವುದನ್ನು ಕಂಡೆವು. ಕುತೂಹಲದಿಂದ ಒಂದು ಮಗುವನ್ನು ತಡೆದು ನಿಲ್ಲಿಸಿ 'ಏನು ಹುಡುಕುತ್ತಿದ್ದೀಯಾ?' ಎಂದು ಕೇಳಿದಾಗ ಆ ಮಗು ತನ್ನ ಕೈಯಲ್ಲಿದ್ದ ಕಾಗದವನ್ನು ತೋರಿಸಿತು. ಅದೊಂದು ಪ್ರಶ್ನೆಪತ್ರಿಕೆಯಾಗಿತ್ತು. 'ಲೋಹಗಳಲ್ಲಿ ಅತ್ಯಂತ ಬೆಲೆಬಾಳುವ ಲೋಹ ಯಾವುದು?' ಎಂಬ ಪ್ರಶ್ನೆಗೆ ಅದರ ಕೆಳಗೆ ನಮೂದಿಸಿರುವ ಕೊಠಡಿ ಮತ್ತು ಪ್ರದರ್ಶಿತ ವಸ್ತುವಿನ ಸಂಖ್ಯೆಯನ್ನು ಹುಡುಕಿಕೊಂಡು ಬಂದ ಆ ಮಗು ಷೋಕೇಸಿನಲ್ಲಿ ಅದನ್ನು ಗುರುತಿಸಿ 'ಪ್ಲಾಟಿನಂ' ಎಂದು ಬರೆದಿತ್ತು. ಇಡೀ ವಸ್ತುಸಂಗ್ರಹಾಲಯವೇ ಒಂದು ಪರೀಕ್ಷಾಕೇಂದ್ರವಾಗಿತ್ತು. ಮ್ಯೂಸಿಯಂನಿಂದ ಹೊರಗೆ ಹೋಗುವಾಗ ಕೌಂಟರ್‌ನಲ್ಲಿ ಉತ್ತರ ಚೆನ್ನಾಗಿ ಬರೆದ ಪ್ರತಿಯೊಂದು ಮಗುವಿಗೂ ಬಣ್ಣ ಬಣ್ಣದ ಪೆನ್ಸಿಲ್‌ಗಳನ್ನು ಬಹುಮಾನವಾಗಿ ನೀಡಲಾಗುತ್ತಿತ್ತು! ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಮಹಾನುಭಾವರ ಹೆಸರಿನಲ್ಲಿ ಕೊಡುವ ಎಲ್ಲ ರಜಾದಿನಗಳನ್ನು ರದ್ದುಪಡಿಸಿ ಆ ದಿನಗಳಂದು ಅವರ

ಪರಿಚಯವನ್ನು ಮಾಡಿಕೊಡುವ ಮ್ಯೂಜಿಯಂಗಾಗಲೀ, ಪ್ರೇಕ್ಷಣೀಯ ಸ್ಥಳಗಳಿಗಾಗಲೀ ಕರೆದುಕೊಂಡು ಹೋಗಿ ಮಕ್ಕಳ ಬೌದ್ಧಿಕಬೆಳವಣಿಗೆ ಉಂಟಾಗುವಂತೆ ಏಕೆ ಮಾಡಬಾರದು ಎಂದು ವಿದ್ಯಾ ಇಲಾಖೆ ಯೋಚಿಸುವುದು ಒಳಿತು.

(ದೃಶ್ಯ 5)

ಒಮ್ಮೆ ಜರ್ಮನಿಯ ಬವೇರಿಯಾ (Bayern) ಪ್ರಾಂತ್ಯದಲ್ಲಿರುವ ಒಂದು ಪ್ರಾಚೀನ ಕೋಟೆಯನ್ನು (castle) ನೋಡಲು ಹೋಗಿದ್ದೆವು. ಒಬ್ಬ ಯುವ ವಿದ್ಯಾರ್ಥಿ ಗೈಡಾಗಿದ್ದು ಆ ಕೋಟೆಯ ವಿವಿಧ ಭಾಗಗಳಿಗೆ ಕರೆದುಕೊಂಡು ಹೋಗಿ ಅದರ ಇತಿಹಾಸವನ್ನು ಪ್ರವಾಸಿಗರಿಗೆ ತುಂಬಾ ಚೆನ್ನಾಗಿ ವಿವರಿಸುತ್ತಿದ್ದ. ಒಂದು ಕೊಠಡಿಗೆ ಹೋದಾಗ ಅಲ್ಲಿ ಹಿಂದಿನ ರಾಜಮಹಾರಾಜರು ಮದ್ಯ ಸೇವಿಸಲು ಬಳಸುತ್ತಿದ್ದ ಕಹಳೆಯಾಕಾರಾದ ಬಹುದೊಡ್ಡ ಗಾತ್ರದ ಗಾಜಿನ 'ವೈನ್ ಬಾಟಲಿ' ಇತ್ತು. ಅದರ ಬಗ್ಗೆ ವಿವರಣೆ ನೀಡುತ್ತಾ ಈ ವೈನ್ ಬಾಟಲಿಯಲ್ಲಿ ಮದ್ಯ ಸೇವಿಸಲು ಒಬ್ಬರಿಂದ ಸಾಧ್ಯವಿಲ್ಲ ಮೂರು ಜನರು ಬೇಕು ಎಂದು ಆ ಯುವ ಗೈಡ್ ವಿನೋದವಾಗಿ ಜರ್ಮನ್ ಭಾಷೆಯಲ್ಲಿ ಹೀಗೆ ಹೇಳಿದ: "Einer zum trinken, anderer zum halten und noch einer den betrunkenen zu halten" ಅಂದರೆ ಒಬ್ಬ ಕುಡಿಯಲು, ಇನ್ನೊಬ್ಬ ಇದನ್ನು ಹಿಡಿದುಕೊಳ್ಳಲು ಮತ್ತೊಬ್ಬ ಕುಡಿದವನನ್ನು ಹಿಡಿದುಕೊಳ್ಳಲು! ನಮ್ಮ ನಾಡಿನಲ್ಲಿ ಎಷ್ಟೋ ವೇಳೆ ಹೀಗೆ ಕುಡಿದು ತಾರುಮಾರು ತೂರಾಡುತ್ತಿರುವವನನ್ನು ಹಿಡಿದುಕೊಳ್ಳಬೇಕಾದ ಈ ಮೂರನೆಯ ವ್ಯಕ್ತಿ ದುರದೃಷ್ಟವಶಾತ್ ಅವನ ಕೈಹಿಡಿದ ಮಡದಿ ಎಂಬುದು ವಿಷಾದನೀಯ.

(ದೃಶ್ಯ 6)

ಕೆಲವು ವರ್ಷಗಳ ಹಿಂದೆ ಬೊಂಬಾಯಿಯಲ್ಲಿ ಬಸವಜಯಂತಿ ಕಾರ್ಯಕ್ರಮವಿತ್ತು. ಜೊತೆಯಲ್ಲಿ ನೂರಾರು ಜನ ಶಿಷ್ಯರು ಮತ್ತು ಮಠದ ಕಲಾವಿದರನ್ನು ಪ್ರವಾಸ ಕರೆದುಕೊಂಡು ಹೋಗಿದ್ದೆವು. ಅಜಂತಾ-ಎಲ್ಲೋರ ಗುಹಾಂತರ್ದೇವಾಲಯಗಳನ್ನು ನೋಡಲು ಹೋದಾಗ ಅಲ್ಲಿರುವ ವಸ್ತುಸಂಗ್ರಹಾಲಯದ ಕೊಠಡಿಯೊಂದರಲ್ಲಿ ಜೈನ ಧರ್ಮದ ಅನೇಕ ತೀರ್ಥಂಕರರ ವಿಗ್ರಹಗಳು ಇದ್ದವು. ಆ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿರುವ ದಿಗಂಬರ ವಿಗ್ರಹಗಳನ್ನು ನೋಡಿ ನಮ್ಮ ಪ್ರವಾಸಿಗರ ಪುಟ್ಟ ಮಗುವೊಂದು ತಟ್ಟನೆ ಕೈತೋರಿಸಿ ತಾಯಿಯ ಕಡೆ ತಿರುಗಿ "Shame, Shame" ಎಂದು ಉದ್ಗರಿಸಿತು! ಮಗುವಿನ ಮುಗ್ಧತೆಯಿಂದ ಹೊರಬಂದ ಈ ಉದ್ಗಾರ ಪ್ರವಾಸಿಗರನ್ನು ನಗೆಗಡಲಲ್ಲಿ ತೇಲಿಸಿತು! ದಿನನಿತ್ಯ ಬಟ್ಟೆ ತೊಡಿಸುವಾಗ ಮಕ್ಕಳು ಹಠಮಾಡಿದರೆ ತಾಯಂದಿರು "Shame, Shame" ಎಂದು ಹಂಗಿಸುವುದಿಲ್ಲವೇ! ಮಗುವಿನ ದೃಷ್ಟಿಯಲ್ಲಿ ಆ ತೀರ್ಥಂಕರರು ಬಟ್ಟೆ ಧರಿಸಲು ಒಪ್ಪದ ಹಠಮಾರಿ ಮಕ್ಕಳಾಗಿದ್ದರು! ಅವರಿಗಿಂತ ತಾನು ಎಷ್ಟೋ ವಾಸಿ ಎಂದು ಮಗು ಭಾವಿಸಿದಂತಿತ್ತು! ತೀರ್ಥಂಕರರನ್ನು ಹಂಗಿಸುವ ಈ ಧೈರ್ಯ ಮುಗ್ಧ ಮಗುವಿಗಲ್ಲದೆ ಮತ್ತಾರಿಗೆ ಇರಲು ಸಾಧ್ಯ? ನೀವೇ ಹೇಳಿ. ಇದಕ್ಕೇ ಅಲ್ಲವೇ ಮಕ್ಕಳನ್ನು ದೇವರು ಇದ್ದ ಹಾಗೆ ಎಂದು ಹೇಳುವುದು. **ಆದರೆ ಈ ದೇವರಂತಹ ಮಕ್ಕಳು ಮುಂದೆ ಬೆಳೆದಂತೆ.....ಏಕೆ 'ದೆವ್ವ'ಗಳಾಗುತ್ತವೆ ಎಂಬುದೇ ದೊಡ್ಡ ಯಕ್ಷಪ್ರಶ್ನೆ!**

24.12.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ